/19166/2022 ಫೋನ್ ನಂ. 080-22243926
ಫ್ಯಾಕ್ಸ್ ನಂ. 080-22110134
ವೆಬ್ ಸೈಟ್: https://kptcl.karnataka.gov.in/
ಇ-ಮೇಲ್: gmtkptcl@gmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್): ಯು40109ಕೆಎ1999ಎಸ್‌ಜಿಸಿ025521

**ನಂ:** ಬಿ19/33425/22-23[5]

**ಲಗತ್ತು:** 2.

**ನಿಗಮ ಕಾರ್ಯಾಲಯ,**
**ಕಾವೇರಿ ಭವನ,**
**ಬೆಂಗಳೂರು-560009,**
**ದಿನಾಂಕ: 10.06.2022.**

**ಮುಖ್ಯ ಇಂಜಿನಿಯರ್(ವಿ),**
**ಪ್ರಸರಣ ವಲಯ, ಕವಿಪ್ರನಿನಿ,**
**ಬೆಂಗಳೂರು/ಬಾಗಲಕೋಟೆ/ಕಲ್ಬುರ್ಗಿ/**
**ಮೈಸೂರು/ತುಮಕೂರು/ಹಾಸನ.**

**ಮಾನ್ಯರೇ,**

**ವಿಷಯ:** ಮುಂಗಾರು ಆಕಸ್ಮಿಕ ಯೋಜನೆ (Monsoon Contingency Plan) ಯ ಅನುಸಾರ ಅಗತ್ಯ ಕ್ರಮಗಳನ್ನು ಕೈಗೊಳ್ಳುವ ಬಗ್ಗೆ.

**ಉಲ್ಲೇಖ:** 1. ನಿಗಮದ ಸುತ್ತೋಲೆ ಸಂಖ್ಯೆ: ಕವಿಪ್ರನಿನಿ/ಬಿ19/345/85-86 ದಿ: 24.05.2021.
2. ಇಂಧನ ಇಲಾಖೆಯ ಸುತ್ತೋಲೆ ಸಂಖ್ಯೆ: ಎನರ್ಜಿ 236 ವಿಎಸ್‌ಸಿ 2022 ದಿ: 21.05.2022.

********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮುಂಗಾರು ಋತುಮಾನದ ಸಂದರ್ಭದಲ್ಲಿ ವಿದ್ಯುತ್ ಸರಬರಾಜಿನಲ್ಲಿ ಮತ್ತು ವಿದ್ಯುತ್ ಜಾಲದ ನಿರ್ವಹಣೆಯಲ್ಲಿ ಉಂಟಾಗಬಹುದಾದ ವ್ಯತಿರಿಕ್ತ ಪರಿಣಾಮಗಳನ್ನು ಸಮರ್ಥವಾಗಿ ನಿಭಾಯಿಸಲು ಕವಿಪ್ರನಿನಿ ವತಿಯಿಂದ ಎಲ್ಲಾ ರೀತಿಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳವ ಕುರಿತಾಗಿ ಉಲ್ಲೇಖ (1)ರಲ್ಲಿ ಸುತ್ತೋಲೆಯನ್ನು ಹೊರಡಿಸಲಾಗಿರುತ್ತದೆ.

ಮುಂದುವರೆದು, ಸದರಿ ವಿಷಯವಾಗಿ ಉಲ್ಲೇಖ (2)ರಲ್ಲಿ Monsoon Contingency Plan ಪ್ರಕಾರ ಪಾಲಿಸಬೇಕಾದ ಕ್ರಮಗಳ ಕುರಿತು ಇಂಧನ ಇಲಾಖೆಯಿಂದ ಸುತ್ತೋಲೆಯನ್ನು ಹೊರಡಿಸಲಾಗಿರುತ್ತದೆ.

ಆದುದರಿಂದ, ಉಲ್ಲೇಖ (2)ರ ಸುತ್ತೋಲೆಯ ಪ್ರತಿಯನ್ನು ಈ ಪತ್ರದೊಂದಿಗೆ ಲಗತ್ತಿಸುತ್ತಾ, ಪ್ರಸ್ತುತ ಮುಂಗಾರು ಋತುಮಾನದ ಸಂದರ್ಭದಲ್ಲಿ, ಉಲ್ಲೇಖ (1) ಹಾಗೂ (2)ರಲ್ಲಿನ ಸುತ್ತೋಲೆಗಳಲ್ಲಿ ಸೂಚಿಸಲಾಗಿರುವ ಎಲ್ಲಾ ಮಾರ್ಗಸೂಚಿಗಳನ್ನನುಸರಿಸಿ, ವಿದ್ಯುತ್ ಸರಬರಾಜಿನಲ್ಲಿ ಅಡಚಣೆಯನ್ನು ತಡೆಗಟ್ಟಲು ಹಾಗೂ ವಿದ್ಯುತ್ ಜಾಲದ ಸಮರ್ಪಕ ನಿರ್ವಹಣೆಯ ದೃಷ್ಟಿಯಿಂದ ಎಲ್ಲಾ ಅಗತ್ಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುವಂತೆ ತಿಳಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ವಿಶ್ವಾಸಿ,

ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ)
ಕವಿಪ್ರನಿನಿ, ಬೆಂಗಳೂರು.

 **ಪ್ರತಿಯನ್ನು,**

1. ವ್ಯವಸ್ಥಾಪಕ ನಿರ್ದೇಶಕರು / ನಿರ್ದೇಶಕರು (ಪ್ರಸರಣ) ರವರ ಹಿರಿಯ ಆಪ್ತ ಕಾರ್ಯದರ್ಶಿಗಳು, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು ರವರುಗಳಿಗೆ ಮಾನ್ಯ ನಿರ್ದೇಶಕರುಗಳ ಮುಂದೆ ಮಂಡಿಸಲು.
2. ಅಧೀಕ್ಷಕ ಇಂಜಿನಿಯರ್ (ವಿ), (ಐಟಿ ಮತ್ತು ಎಂ.ಐ.ಎಸ್), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು – ನಿಗಮದ ಅಂತರ್ಜಾಲದಲ್ಲಿ ಪ್ರಕಟಿಸಲು.

C.O.No: 153319

# ಕರ್ನಾಟಕ ಸರ್ಕಾರ

ಸಂಖ್ಯೆ: ಎನರ್ಜಿ 236 ವಿಎಸ್‌ಸಿ 2022

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸ ಸೌಧ,
ಬೆಂಗಳೂರು, ದಿನಾಂಕ: 21-05-2022

M.D.
23 MAY 2022
KPTCL

## ಸುತ್ತೋಲೆ

ವಿಷಯ: Monsoon Contingency Plan ಪ್ರಕಾರ ಕೆಪಿಟಿಸಿಎಲ್ ಮತ್ತು ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ಕ್ರಮ ವಹಿಸುವ ಬಗ್ಗೆ.

*****

ರಾಜ್ಯದಲ್ಲಿ ಮುಂಗಾರು ಋತುಮಾನವು ಪ್ರಾರಂಭವಾಗಲಿದ್ದು, ವಿದ್ಯುತ್ ಸರಬರಾಜಿನಲ್ಲಿ ಮತ್ತು ವಿದ್ಯುತ್ ಜಾಲದ ನಿರ್ವಹಣೆಯಲ್ಲಿ ಉಂಟಾಗಬಹುದಾದ ವ್ಯತಿರಿಕ್ತ ಪರಿಣಾಮಗಳನ್ನು ಸಮರ್ಥವಾಗಿ ನಿಭಾಯಿಸಲು ಮತ್ತು ಎಲ್ಲಾ ರೀತಿಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕಾದ ಅವಶ್ಯಕತೆಯಿರುವುದರಿಂದ ಕೆಪಿಟಿಸಿಎಲ್ / ವಿದ್ಯುತ್ ಸರಬರಾಜು ಕಂಪನಿಗಳು ಈ ಕೆಳಕಂಡ ಕ್ರಮಗಳನ್ನು ಕೂಡಲೇ ಕೈಗೊಳ್ಳಲು ಸೂಚಿಸಲಾಗಿದೆ.

1. ಕೆ.ಪಿ.ಟಿ.ಸಿ.ಎಲ್ ಮತ್ತು ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳು ವಿದ್ಯುತ್ ಜಾಲದ ಪೂರ್ವ-ಮುಂಗಾರು ನಿರ್ವಹಣೆಯನ್ನು ಆದ್ಯತೆ ಮೇಲೆ ಹಾಗೂ ಪರಿಣಾಮಕಾರಿಯಾಗಿ ಕೈಗೊಳ್ಳುವುದು ಹಾಗೂ ಮುಂಗಾರು ಸೂಕ್ಷ್ಮ ಪ್ರದೇಶಗಳು, ಸೂಕ್ಷ್ಮ ಸ್ಥಾವರಗಳು ಮತ್ತು ಪ್ರಸರಣ ಮಾರ್ಗಗಳು ಇತ್ಯಾದಿಗಳನ್ನು ಆದ್ಯತೆ ಮೇಲೆ ಗುರುತಿಸಿ, ಪರಿಹಾರ ಕ್ರಮಗಳನ್ನು ಕೈಗೊಳ್ಳುವುದು.
2. ಎಲ್ಲಾ ಸಂಬಂಧಿತ ಅಧಿಕಾರಿಗಳು ಮುಂಗಾರು ಸಮಯದಲ್ಲಿ ವಿದ್ಯುತ್ ಜಾಲವನ್ನು ಸುಸ್ಥಿತಿಯ ಬಗ್ಗೆ ಪರಿಣಾಮಕಾರಿಯಾಗಿ ಮೇಲ್ವಿಚಾರಣೆ ನಡೆಸುವುದು.
3. ವಿತರಣಾ ಜಾಲದ ನಿರ್ವಹಣೆಗೆ ಬೇಕಾಗುವ ಅಗತ್ಯ ಸಾಮಗ್ರಿಗಳಾದ ವಿದ್ಯುತ್ ಕಂಬಗಳು, ಪರಿವರ್ತಕಗಳು, ವಾಹಕಗಳು, Insulators ಹಾಗೂ ಇತರೆ ಸಾಮಗ್ರಿಗಳ ದಾಸ್ತಾನು ಮತ್ತು ಸಾಗಣೆ ಬಗ್ಗೆ ಸೂಕ್ತ ಕ್ರಮ ವಹಿಸುವುದು. ಎಲ್ಲಾ ವಿಫಲಗೊಂಡ ಪರಿವರ್ತಕಗಳನ್ನು ಆದ್ಯತೆ ಮೇಲೆ ದುರಸ್ತಿ ಕೇಂದ್ರಕ್ಕೆ ಕಳುಹಿಸಿ, ದುರಸ್ತಿಗೊಳಿಸಿ, ಬದಲಾಯಿಸಲು ಕ್ರಮ ವಹಿಸುವುದು.
4. ಪ್ರತಿ ಉಪವಿಭಾಗದ ಸೇವಾ ಕೇಂದ್ರದಲ್ಲಿ ಸಿಬ್ಬಂದಿಗಳ ನಿಯೋಜನೆ, ವಾಹನ ಸೌಕರ್ಯ, ತುರ್ತು ನಿರ್ವಹಣೆಗೆ ಬೇಕಾದ Hand Torch, Fuse wire, Insulation Tape, Ladder, Rope ಮುಂತಾದ ಅಗತ್ಯ ಸಲಕರಣೆಗಳು ಇರುವಂತೆ ಖಾತ್ರಿ ಪಡಿಸಿಕೊಂಡು ಸೇವಾ ಕೇಂದ್ರಗಳನ್ನು ಸಜ್ಜುಗೊಳಿಸುವುದು. Rain coat, Rubber Hand gloves, Helmet, Safety Belt, Ladder ಇತ್ಯಾದಿ ಸುರಕ್ಷತಾ ಸಲಕರಣೆಗಳನ್ನು ಕಡ್ಡಾಯವಾಗಿ ಉಪಯೋಗಿಸುವಂತೆ ಸಿಬ್ಬಂದಿಗಳಿಗೆ ಸೂಚಿಸುವುದು.
5. ಪ್ರತಿಯೊಂದು ಮಟ್ಟದ ಕಛೇರಿಯಲ್ಲಿ ಅಧಿಕಾರಿಗಳು ಈ ಅವಧಿಯಲ್ಲಿ ಕೇಂದ್ರ ಸ್ಥಾನ ಬಿಡದೇ, ಉಸ್ತುವಾರಿ ಹಾಗೂ ಮೇಲ್ವಿಚಾರಣೆಯನ್ನು ನಡೆಸುವುದು ಅತಿ ಮುಖ್ಯವಾಗಿರುತ್ತದೆ. ಎಲ್ಲಾ ಸಂಬಂಧಪಟ್ಟ ಅಧಿಕಾರಿಗಳು ಸ್ಥಿರ ದೂರವಾಣಿ, ಮೊಬೈಲ್ ಫೋನ್, 1912 ಸಹಾಯವಾಣಿ ಗಳನ್ನು ಸದಾ ಚಾಲನೆಯಲ್ಲಿಟ್ಟುಕೊಂಡು ಸಾರ್ವಜನಿಕರ ದೂರುಗಳಿಗೆ ಸ್ಪಂದಿಸುವುದು. ಆಸ್ಪತ್ರೆಗಳು ಮತ್ತು ಇತರೆ ಪ್ರಮುಖ ಸ್ಥಾವರಗಳಿಗೆ ವಿದ್ಯುತ್ ಅಡಚಣೆಯನ್ನು ತಪ್ಪಿಸಲು ಎಲ್ಲಾ ರೀತಿಯ ಸಿದ್ಧತಾ ಕ್ರಮಗಳನ್ನು ಕೈಗೊಳ್ಳುವುದು.

6. ಮುಂಗಾರು ಸಮಯದಲ್ಲಿ ವಿದ್ಯುತ್ ಮಾರ್ಗಗಳಿಂದ ಅಪಘಾತಗಳು ಜರುಗುವ ಸನ್ನಿವೇಶಗಳ ಬಗ್ಗೆ ಹಾಗೂ ಅಪಘಾತಗಳನ್ನು ತಡೆಗಟ್ಟುವ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವುದು.
7. ಮುಂಗಾರು ಆಕಸ್ಮಿಕದ ದಿನವಹಿ ವರದಿಗಳನ್ನು ಮೇಲಾಧಿಕಾರಿಗಳಿಗೆ ತಪ್ಪದೇ ಸಲ್ಲಿಸುವುದು.

21/5/22

(ಅಪರ್ಣಾ ಪಾವಟೆ)
ಸರ್ಕಾರದ ಅಧೀನ ಕಾರ್ಯದರ್ಶಿ,
ಇಂಧನ ಇಲಾಖೆ.

21.05.2022

ಇವರಿಗೆ:

1) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ, ಬೆಂಗಳೂರು.
2) ವ್ಯವಸ್ಥಾಪಕ ನಿರ್ದೇಶಕರು, ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ, ಬೆಂಗಳೂರು.
3) ವ್ಯವಸ್ಥಾಪಕ ನಿರ್ದೇಶಕರು, ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ, ಮೈಸೂರು.
4) ವ್ಯವಸ್ಥಾಪಕ ನಿರ್ದೇಶಕರು, ಮಂಗಳೂರು ವಿದ್ಯುತ್ ಸರಬರಾಜು ಕಂಪನಿ, ಮಂಗಳೂರು.
5) ವ್ಯವಸ್ಥಾಪಕ ನಿರ್ದೇಶಕರು, ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ, ಹುಬ್ಬಳ್ಳಿ.
6) ವ್ಯವಸ್ಥಾಪಕ ನಿರ್ದೇಶಕರು, ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ, ಕಲಬುರ್ಗಿ.
7) ವ್ಯವಸ್ಥಾಪಕ ನಿರ್ದೇಶಕರು, ಹುಕ್ಕೇರಿ ಗ್ರಾಮೀಣ ವಿದ್ಯುತ್ ಸಹಕಾರಿ ಸಂಘ, ಹುಕ್ಕೇರಿ.

ಫೋನ್ ನಂ. 080-22243926
ಫ್ಯಾಕ್ಸ್ ನಂ. 080-22110134
ವೆಬ್‌ಸೈಟ್ : www.kptcl.com
ಇಮೇಲ್ ಐಡಿ: dgmtkptcl@rediffmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

Corporate Identity Number (CIN): U40109KA1999SGC025521

ಕವಿಪ್ರನಿನಿ/ಬಿ19/345/85-86

ನಿಗಮ ಕಾರ್ಯಾಲಯ,
ಕಾವೇರಿ ಭವನ,
ಬೆಂಗಳೂರು-560009,
ದಿನಾಂಕ: 24.05.2021.

## ಸುತ್ತೋಲೆ

ವಿಷಯ: ಮುಂಗಾರು ಆಕಸ್ಮಿಕ ಯೋಜನೆ (Monsoon Contingency Plan) ಅನ್ನು ಎಲ್ಲಾ ಪ್ರಸರಣ ವಲಯಗಳಲ್ಲಿ ಜಾರಿಗೆ ತರುವ ಬಗ್ಗೆ.

ಉಲ್ಲೇಖ: ವ್ಯವಸ್ಥಾಪಕ ನಿರ್ದೇಶಕರವರಿಂದ ಅನುಮೋದಿತ ಟಿಪ್ಪಣಿ ದಿನಾಂಕ: 24.05.2021.

******

ರಾಜ್ಯದಲ್ಲಿ ಮುಂಗಾರು ಋತುಮಾನವು ಪ್ರಾರಂಭವಾಗಿದ್ದು, ವಿದ್ಯುತ್ ಸರಬರಾಜಿನಲ್ಲಿ ಮತ್ತು ವಿದ್ಯುತ್ ಜಾಲದ ನಿರ್ವಹಣೆಯಲ್ಲಿ ಉಂಟಾಗಬಹುದಾದ ವ್ಯತಿರಿಕ್ತ ಪರಿಣಾಮಗಳನ್ನು ಸಮರ್ಥವಾಗಿ ನಿಭಾಯಿಸಲು ಮತ್ತು ಎಲ್ಲಾ ರೀತಿಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕಾಗಿರುವ ಅವಶ್ಯಕತೆಯಿರುವುದರಿಂದ ಪ್ರಸರಣ ವಲಯಗಳಲ್ಲಿ ಕೆಳಕಂಡ ಅಗತ್ಯ ಕ್ರಮಗಳನ್ನು ಕೈಗೊಳ್ಳಲು ಸೂಚಿಸಿದೆ.

1. ಪ್ರಸರಣಾ ಜಾಲದ ನಿರ್ವಹಣೆಗೆ ಬೇಕಾಗುವ ಅಗತ್ಯ ಸಾಮಗ್ರಿಗಳಾದ ವಿದ್ಯುತ್ ಗೋಪುರಗಳು, ವಾಹಕಗಳು, Insulators, ಹಾಗೂ ಇತರೆ ಅಗತ್ಯ ಸಾಮಗ್ರಿಗಳನ್ನು ಸಾಕಷ್ಟು ಸಂಖ್ಯೆಯಲ್ಲಿ ಉಗ್ರಾಣದಲ್ಲಿ ದಾಸ್ತಾನು ಇಟ್ಟುಕೊಳ್ಳುವುದು.
2. ಎಲ್ಲಾ ಅಧಿಕಾರಿ ನೌಕರರುಗಳು ಮುಂಗಾರಿನ ಅವಧಿಯಲ್ಲಿ ಕೇಂದ್ರ ಸ್ಥಾನದಲ್ಲಿ ಇದ್ದು, ಉಸ್ತುವಾರಿ ಹಾಗೂ ಮೇಲ್ವಿಚಾರಣೆಯನ್ನು ನಡೆಸುವುದು. ಎಲ್ಲಾ ಸಂಬಂಧಪಟ್ಟ ಅಧಿಕಾರಿಗಳು ಸ್ಥಿರ ದೂರವಾಣಿ, ಮೊಬೈಲ್ ಫೋನ್‌ಗಳನ್ನು ಸದಾ ಚಾಲನೆಯಲ್ಲಿಟ್ಟುಕೊಳ್ಳುವುದು.
3. ಮುಂಗಾರು ಆಕಸ್ಮಿಕದ ಅವಘಡಗಳ ತೀವ್ರತೆಯನ್ನಾಧರಿಸಿ ಮೇಲಾಧಿಕಾರಿಗಳಿಗೆ ತಕ್ಷಣವೇ ವರದಿ ಮಾಡುವುದು.
4. ಮುಂಗಾರು ಆಕಸ್ಮಿಕ ಯೋಜನೆಯಡಿ ತಾತ್ಕಾಲಿಕ ಗ್ಯಾಂಗ್‌ಮನ್‌ಗಳ ಅವಶ್ಯಕತೆ ಕಂಡುಬಂದಲ್ಲಿ, ನಿಯೋಜನೆಗೆ ಕ್ರಮ ಕೈಗೊಳ್ಳುವುದು.
5. ಅಪಾಯಕಾರಿ ಗೋಪುರಗಳನ್ನು ಗುರುತಿಸಿ, ಸರಿಪಡಿಸಲು ಕ್ರಮ ವಹಿಸುವುದು.
6. Rubber Hand gloves, Helmet, Safety Belt, Ladder ಇತ್ಯಾದಿ ಸುರಕ್ಷತಾ ಸಲಕರಣೆಗಳನ್ನು ಕಡ್ಡಾಯವಾಗಿ ಉಪಯೋಗಿಸುವಂತೆ ಸಿಬ್ಬಂದಿಗಳಿಗೆ ಸೂಚಿಸುವುದು.

SE (IT & MIS)

40

7. ಪ್ರಾಮುಖ್ಯವಾದ ಸ್ಥಾವರಗಳನ್ನು ಗುರುತಿಸಿ ಅವುಗಳ ವಿದ್ಯುತ್ ಸರಬರಾಜಿನಲ್ಲಿ ಅಡಚಣೆಯಾಗದಂತೆ ನಿರ್ವಹಣೆ ಮಾಡುವುದು. ಉದಾಹರಣೆಗೆ ಆಮ್ಲಜನಕ ಉತ್ಪಾದನಾ ಘಟಕಗಳು, ಆಸ್ಪತ್ರೆಗಳು, ಪ್ರಮುಖ ಕಛೇರಿಗಳು, ದೂರವಾಣಿ ವಿನಿಮಯ ಕೇಂದ್ರಗಳು ಇತ್ಯಾದಿ.
8. Radial Transmission Line ಗಳನ್ನು ಸುಸ್ಥಿತಿಯಲ್ಲಿಡಲು ಅಗತ್ಯ ಕ್ರಮ ಕೈಗೊಳ್ಳುವುದು.
9. ಕಾಮಗಾರಿಯ ಸಂದರ್ಭಗಳಲ್ಲಿ ಹೆಚ್ಚುವರಿ ನೌಕರರು ಇದ್ದರೆ ಅವರ ವಸತಿ ಹಾಗೂ ಇತರೆ ವ್ಯವಸ್ಥೆಗಳನ್ನು ನಿಭಾಯಿಸುವುದು.
10. ದುರಂತ ಸಂದರ್ಭಗಳಲ್ಲಿ ತುರ್ತಾಗಿ ವಿದ್ಯುತ್ ಸರಬರಾಜನ್ನು ಸ್ಥಗಿತಗೊಳಿಸಿ ಹಾನಿಯನ್ನು ಕಡಿಮೆಗೊಳಿಸುವುದು.
11. COVID-19 ಸಾಂಕ್ರಾಮಿಕ ರೋಗ ಹರಡುವಿಕೆಯನ್ನು ತಡೆಗಟ್ಟಲು ಸರ್ಕಾರದಿಂದ ಹೊರಡಿಸುವ ಎಲ್ಲಾ ಮಾರ್ಗಸೂಚಿಗಳನ್ನು ಅನುಸರಿಸುವುದು ಹಾಗೂ ಸುರಕ್ಷತಾ ಕ್ರಮಗಳನ್ನು ಅನುಸರಿಸಿ, ಕಾರ್ಯನಿರ್ವಹಿಸುವುದು.

ಸದರಿ ಸೂಚನೆಗಳನ್ನು ಕಡ್ಡಾಯವಾಗಿ ಅನುಸರಿಸಲು ಸೂಚಿಸಿದೆ.

24/5/21

**ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ)**
**ಕವಿಪ್ರನಿನಿ**

**ಪ್ರತಿಗಳು:**

1. ಎಲ್ಲಾ ಮುಖ್ಯ ಇಂಜಿನಿಯರುಗಳು (ವಿ), ಕವಿಪ್ರನಿನಿ.
2. ಎಲ್ಲಾ ಆರ್ಥಿಕ ಸಲಹೆಗಾರರು, ಕವಿಪ್ರನಿನಿ.
3. ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ)/ (ಸಿವಿಲ್), ಕವಿಪ್ರನಿನಿ.
4. ಎಲ್ಲಾ ಲೆಕ್ಕ ನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ.
5. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರುಗಳು (ವಿ)/(ಸಿವಿಲ್), ಕವಿಪ್ರನಿನಿ.
6. ಕಂಪನಿ ಕಾರ್ಯದರ್ಶಿ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
7. ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು (ಪ್ರಸರಣ) / ನಿರ್ದೇಶಕರು (ಹಣಕಾಸು)/ /ನಿರ್ದೇಶಕರು (ಆ ಮತ್ತು ಮಾ.ಸಂ) ರವರುಗಳ ಹಿರಿಯ ಆಪ್ತ ಕಾರ್ಯದರ್ಶಿಗಳು, ಕವಿಪ್ರನಿನಿ, ಕಾವೇರಿಭವನ, ಬೆಂಗಳೂರು.

**ಪ್ರತಿ:**

ಅಧೀಕ್ಷಕ ಇಂಜಿನಿಯರ್(ವಿ), (ಐಟಿ), ಕವಿಪ್ರನಿನಿ, ಬೆಂಗಳೂರುರವರಿಗೆ – ನಿಗಮದ ಅಂತರ್ಜಾಲದಲ್ಲಿ ಪ್ರಕಟಿಸಲು.